ಹಳ್ಳಿಗಳಲ್ಲಿ ಬಹಳ ಮರ್ಯಾದೆ ಗಳಿಸಿದರೂ, ಕ್ರೈಸ್ತರಾಗಿ ಜಾತಿಗೆಟ್ಟವರೆಂದು ಅನುಮಾನಕ್ಕೆ ಅಪಮಾನಕ್ಕೆ ಒಳಗಾಗುವ ಮತ್ತು ಅಲ್ಲಿದ್ದ ಎಲ್ಲ ಜಾತಿಯವರನ್ನು ಮುಟ್ಟಿರುವುದರಿಂದ ಶುದ್ಧೀಕರಣಗೊಳ್ಳುವ ಪ್ರಸ್ತಾಪ ಪರಂಜ್ಯೋತಿಯವರ ಕೃತಿಗಳಲ್ಲಿದೆ. ಹುಟ್ಟಿನಿಂದ ದಲಿತರಾಗಿದ್ದೂ ದಲಿತಪ್ರಜ್ಞೆಯ ಸ್ಪರ್ಶವಿಲ್ಲದೆ ಅಥವಾ ಅದರ ಅಗತ್ಯ ಕಾಣದೆ ಬದುಕಿ ಬರೆದ ಲೇಖಕರಾಗಿ ಪರಂಜ್ಯೋತಿ ತೋರುತ್ತಾರೆ. ಇವರಂತೆ ಬದುಕಿ ಬರೆದ ಮೊದಲ ತಲೆಮಾರಿನ ದಲಿತ ಲೇಖಕರೆಂದರೆ 'ಬನದ ಸೆರಗು', 'ಚಿನ್ನದಗಿರಿ ಯಾತ್ರೆ' ಮೊದಲಾದ ಕೃತಿಗಳನ್ನು ಬರೆದ, ಮೈಸೂರು ಸೀಮೆಯ ಜಿ. ವೆಂಕಟಯ್ಯನವರು. ಇವರ 'ಬನದ ಸೆರಗು' ಸೋಲಿಗರ ಜೀವನವನ್ನು ಕುರಿತ ಕಥನ. ಪರಂಜ್ಯೋತಿಯವರೂ ಬುಡಕಟ್ಟುಗಳ ಬದುಕಿನ ಬಗ್ಗೆ ಬರವಣಿಗೆ ಮಾಡಿದವರು.

ಬಾಳನ್ನು ಬೇರೆಬೇರೆ ಊರುಗಳಲ್ಲಿ ಜೀವನ ಕಳೆದ ಪರಂಜ್ಯೋತಿಯವರಲ್ಲಿ ಅಲೆಮಾರಿ ಪ್ರವೃತ್ತಿಯಿತ್ತು. 'ಬೆಟ್ಟಸಾಲಿನ ಮೋಡಿ' ಮೊದಲಾದ ಪ್ರವಾಸ ಬರಹಗಳಲ್ಲಿ ಅವರ ಚಾರಣತನ ಮತ್ತು ಪ್ರವಾಸಗುಣಗಳನ್ನು ಕಾಣಬಹುದು. ಪಯಣ ಮತ್ತು ವಲಸೆ ಅವರ ಬರಹಗಳ ಪ್ರಧಾನ ಆಶಯ. ಅವರ 'ಕೋಡೆಮಳೆ' ಕಾದಂಬರಿ, ಮೈಸೂರು ಕೇರಳ ತಮಿಳುನಾಡು ಸೀಮೆಗಳಿಂದ ನೀಲಗಿರಿಗೆ ವಲಸೆಹೋದ ಮತ್ತು ಊರಿಗೆ ಮರಳಿದ ಜನರ ಬದುಕಿನ ಕಥನ. ಆದರೆ ಪ್ರದೇಶವಿಶಿಷ್ಟ ವಿವರಗಳನ್ನು ದಾಖಲಿಸುವ ಪ್ರವಾಸಿಗಪ್ರಜ್ಞೆ ಮೇಲುಗೈ ಪಡೆದು, ವಿವರಗಳನ್ನು ಕರಗಿಸಿ ಜೀವಂತ ಬದುಕನ್ನು ಕಟ್ಟುವ ಕಥೆಗಾರ ಪ್ರಜ್ಞೆ ಹಿಂಜರಿದಿರುವ ಶಿಥಿಲ ಕಾದಂಬರಿ ಅದು. ತಮ್ಮ ಕಥೆ, ಕಾದಂಬರಿ, ಪ್ರವಾಸ ಕಥನಗಳಲ್ಲಿರುವ ಇಂತಹ ಸೃಜನಶೀಲ ಮಿತಿಗಳನ್ನು ಮೀರುವ ಕಾರಣಕ್ಕಾಗಿಯೇ, ಅವರ 'ಮಂಜಿನೆಡೆಯ ಚಿತ್ರಗಳು' ಮಹತ್ವದ್ದಾಗಿದೆ. ಇದನ್ನು ಲೇಖಕರು ಆತ್ಮಕಥೆ ಎಂದು ಕರೆದುಕೊಳ್ಳದೆ ಅನುಭವ ಕಥನ ಎಂದು ಕರೆದುಕೊಂಡಿದ್ದಾರೆ. ಅದರ ಮುನ್ನುಡಿಯ ಕೆಲವು ಮಾತುಗಳಿವು:

"ನೀಲಗಿರಿ ಎಂದರೆ ಅದೊಂದು ದುರ್ಗಮ ಕೊಂಪೆ. ಬರೀ ಬೆಟ್ಟಗುಡ್ಡಗಳು. ದಟ್ಟಕಾಡುಗಳು. ಹಿಡಿದು ದಬ್ಬುವ ಬಿರುಸುಗಾಳಿ. ಜಿಟಿಜಿಟಿ ಮಳೆ,




ಸದಾ ಕವಿದಿರುವ ಮಂಜು, ತುಂಬಿ ಹರಿಯುವ ತೊರೆಗಳು, ಮೈಮರಗಟ್ಟಿಸುವ ಚಳಿ, ಅಲ್ಲದೆ ತೊದವ, ಬಡಗ, ಕೋತ, ಇರುಳ ಮತ್ತು ಕುರುಬ ಮುಂತಾದ ಮೂಲನಿವಾಸಿಗಳ ತಾಣ – ಇವಿಷ್ಟೇ ಹೊರಜಗತ್ತಿಗೆ ಪರಿಚಯವಾದ ಕಾಲವೊಂದಿತ್ತು. ಬಿಳಿಯರು ಅಲ್ಲಿ ಕಾಫಿ ಟೀ ತೋಟಗಳನ್ನು ಅಭಿವೃದ್ಧಿ ಪಡಿಸಲು ಮುಂದಾದ ನಂತರ, ನೆರೆಹೊರೆಯ ರಾಜ್ಯಗಳಿಂದ ಲಕ್ಷಾಂತರ ಅಜ್ಞಾತ ದುಡಿಮೆಗಾರರು ಅಲ್ಲಿಗೆ ಬಂದರು. ಬೆಟ್ಟಗಳ ಮೇಲೆ ರಸ್ತೆ ಮಾಡಿದರು. ಕಾಫಿ, ಟೀ ತೋಟ ಬೆಳೆಸಿದರು. ಊರುಗಳನ್ನು ಅಣೆಕಟ್ಟುಗಳನ್ನು ಕಟ್ಟಿದರು. ಅಲ್ಲಿನ ಹವಾಮಾನದ ವೈಪರೀತ್ಯವನ್ನು ಎದುರಿಸಿ ಸಮೃದ್ಧಗೊಳಿಸಿದರು. ಅಜ್ಞಾತ ದುಡಿಮೆಗಾರರ ಮಧ್ಯ ಹುಟ್ಟಿಬೆಳೆದ ನಾನು ಆ ಜನರ ಬದುಕಿನ ಸುಖ ಸಂತೋಷ ಬವಣೆಗಳ ತುಣುಕೊಂದನ್ನು ಇಲ್ಲಿ ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದೇನೆ".

'ಅಜ್ಞಾತ ದುಡಿಮೆಗಾರರ ಬದುಕಿನ ಸುಖ ಸಂತೋಷ ಬವಣೆ' ಎಂಬ ಇಲ್ಲಿನ ವಿವರಣೆ, ಪರಂಜ್ಯೋತಿಯವರ ಬರಹಗಳ ತಿರುಳೆನ್ನಬಹುದು. ಅವರು ಕಾಣಿಸುವ 19–20ನೇ ಶತಮಾನದ ನೀಲಗಿರಿ ಸೀಮೆಯ ಚಿತ್ರಗಳು ಚಾರಿತ್ರಿಕವಾಗಿ ವಿಶೇಷವಾಗಿವೆ. ಯಾಕೆಂದರೆ, ಈ ಸೀಮೆಯು ಹಲವು